ನಮ್ಮ ಬದುಕನ್ನು ಹೆಚ್ಚು ಸುಲಭ ಮತ್ತು ಸುಖಮಯವಾಗಿಸಬಹುದು. ನಾಗರಿಕತೆ ನಮಗೆ ನೀಡುವ ಒಳ್ಳೆಯ ಸಂಗತಿಗಳನ್ನು ಸಾರ್ವಜನಿಕ ಹಿತಕ್ಕಾಗಿ ಬಳಸಿಕೊಳ್ಳಲು, ದೀರ್ಘಕಾಲಿಕ ಲಾಭಕ್ಕಾಗಿ ಬಳಸಿಕೊಳ್ಳಲು ಪ್ರೋತ್ಸಾಹಿಸುವುದು ನಮ್ಮ ಸಂಸ್ಕೃತಿ. ಪೈರಿನ ಜೊತೆಗೆ ಕಳೆಯೂ ಬೆಳೆಯುವ ಹಾಗೆ, ನಾಗರಿಕತೆಯು ನಮಗೆ ಲೌಕಿಕ ಪಾಷಂಡಿತನವನ್ನೂ ತಂದೊಡ್ಡಬಹುದು. ಆದರೆ ನೈತಿಕತೆಯ ಮೇಲೆ ಒತ್ತುಕೊಡುವ ಹಾಗೂ ಜೀವನದ ಬಗ್ಗೆ ಸಮಷ್ಟಿ ದೃಷ್ಟಿಯುಳ್ಳ ಸಂಸ್ಕೃತಿಯು, ನಾಗರಿಕತೆಯ ಕೆಟ್ಟ ಪರಿಣಾಮಗಳನ್ನು ಕಡಿಮೆಮಾಡಲೆತ್ನಿಸುವುದಲ್ಲದೆ ಅದನ್ನು ಪರಿಷ್ಕರಿಸಿ ಉತ್ತಮಮಟ್ಟಕ್ಕೆ ಕೊಂಡೊಯ್ಯಲೂಬಹುದು.

ವಾಲ್ಮೀಕಿಯ ರಾಮಾಯಣವು ಬದುಕಿನ ಈ ಎರಡು ಅಂಶಗಳನ್ನೂ ಪ್ರತಿಬಿಂಬಿಸುತ್ತದೆ. ಸಂಸ್ಕೃತಿ ಹಾಗೂ ನಾಗರಿಕತೆಗಳ ಮೂರು ಬೇರೆಬೇರೆ ಪ್ರಾತಿನಿಧಿಕ ಮಾದರಿಗಳನ್ನು ಅದು ನಮ್ಮೆದುರು ಅನಾವರಣಗೊಳಿಸುತ್ತದೆ: **ಅಯೋಧ್ಯೆಯದು, ಲಂಕೆಯದು** ಮತ್ತು **ಕಿಷ್ಕಿಂಧೆಯದು.**

ದಶರಥನ ಆಳ್ವಿಕೆಯಲ್ಲಿ ಮೊದಲು ಬರುವ ಮತ್ತು ಆಮೇಲೆ ರಾಮನ ಆಳ್ವಿಕೆಯಲ್ಲಿ ಬರುವ ಅಯೋಧ್ಯೆಯ ವಿವರಣೆಯು ನಮಗೆ ಆಗಿನ ಮುಂದುವರಿದ ಸಂಸ್ಕೃತಿ–ನಾಗರಿಕತೆಗಳ ಕಲ್ಪನೆಯನ್ನು ಮಾಡಿಕೊಡುತ್ತದೆ. ಸುಂದರವಾಗಿ ಅಲಂಕರಿಸಿದ ಪ್ರಾಸಾದಗಳಿಂದ ತುಂಬಿದ ನಗರ; ಅಗಲವಾದ, ಆಗಿಂದಾಗ್ಗೆ ನೀರಿನಿಂದ ತೊಳೆಯಲ್ಪಡುವ ಚೊಕ್ಕಟವಾದ ರಸ್ತೆಗಳು; ಭದ್ರವಾಗಿ, ಚೆನ್ನಾಗಿ ಕಟ್ಟಲ್ಪಟ್ಟ, ಕಾವಲುಗಾರರಿಗೂ ಅವರ ಸಹಾಯಕರಿಗೂ ಬೇಕಾದ ಪರಿಕರಗಳಿಂದ ತುಂಬಿದ ಕೋಟೆಗಳು; ಯಾವಾಗಲೂ ಯುದ್ಧಸಿದ್ಧತೆಯಲ್ಲೇ ಇಡಲ್ಪಟ್ಟ, ಆಯುಧಪಾಣಿಯಾದ ಸೇನಾ ಬಲ; ಅದರಲ್ಲಿ ಶಸ್ತ್ರಾಸ್ತ್ರಗಳ ಬಳಕೆಯಲ್ಲಿ ಪರಿಣತರಾದ ವೀರಯೋಧರು, ಅದರಲ್ಲೂ ಧನುರ್ವಿದ್ಯಾನೈಪುಣ್ಯವುಳ್ಳವರು. ಆದರೂ, ಯುದ್ಧದಲ್ಲಿ ಅವರು ನಿರಾಯುಧನಾದ ಶತ್ರುವಿನ ಮೇಲೆ ಆಕ್ರಮಣ ಮಾಡದ, ಓಡಿಹೋಗುತ್ತಿರುವವರನ್ನು ಹೊಡೆಯದ, ಧರ್ಮಯುದ್ಧದ ನಿಯಮಗಳನ್ನು ಪಾಲಿಸುವ ಉದಾರಹೃದಯರು. ಪ್ರಜೆಗಳು ಸುಖ ಶಾಂತಿಗಳಿಂದ ಕೂಡಿ ತೃಪ್ತ ಜೀವನವನ್ನು ನಡೆಸುತ್ತಿದ್ದರು. ವೇದಗಳ ಅಧ್ಯಯನ ಹಾಗೂ ಪ್ರಸರಣ, ಯಜ್ಞಯಾಗಾದಿಗಳು ಯಾವುದೇ ಅಡೆತಡೆಗಳಿಲ್ಲದೆ ಸಾಗುತ್ತಿದ್ದವು. ಸಮರ್ಥ ಮಂತ್ರಿಗಳಿಂದ ಬೆಂಬಲಿಸಲ್ಪಟ್ಟು, ರಾಜಗುರು ಸ್ಥಾನದಲ್ಲಿರುವ ಹಾಗೂ ಇನ್ನಿತರ ಋಷಿಮುನಿಗಳ ಮಾರ್ಗದರ್ಶನದಲ್ಲಿ ರಾಜನ ಆಳ್ವಿಕೆ ದೇಶವನ್ನು ತುಂಬ ಯಶಸ್ವಿಯಾಗಿ ಮುನ್ನಡೆಸುತ್ತಿತ್ತು.



ಸತ್ಯ ಧರ್ಮಗಳೆಂಬ ಮೂಲಭೂತ ಅಂಶಗಳು ಇಡೀ ರಾಷ್ಟ್ರದ ತಳಹದಿಯಾಗಿದ್ದವು. ನಾಲ್ಕು ವರ್ಣಗಳ ಮತ್ತು ನಾಲ್ಕು ಆಶ್ರಮಗಳಲ್ಲಿರುವವರ ಕರ್ತವ್ಯಗಳು ಚಾಚೂತಪ್ಪದಂತೆ ಪರಿಪಾಲಿಸಲ್ಪಡುತ್ತಿದ್ದವು; ಅವಶ್ಯವೆನಿಸಿದಾಗ ಶಿಕ್ಷೆಯನ್ನೂ ವಿಧಿಸುತ್ತಿದ್ದರು. ಕೈಕೇಯಿಗೆ ಕೊಟ್ಟ ಮಾತನ್ನು ತಪ್ಪದಿರುವ ದಶರಥ, ಅದರ ಪಾಲನೆಗಾಗಿ ತಕ್ಷಣವೇ ಸಿಂಹಾಸನವನ್ನು ತ್ಯಜಿಸಿ ವನವಾಸಕ್ಕೆ ತೆರಳಿದ ರಾಮ, ಅವನೊಂದಿಗೆ ಸ್ವಂತ ಇಚ್ಛೆಯಿಂದಲೇ ಹೊರಟ ಸೀತೆ ಹಾಗೂ ಲಕ್ಷ್ಮಣ, ಎಲ್ಲರಿಗೂ ಮೇಲ್ಪಂಕ್ತಿಯಾಗುವ ರಾಮನನ್ನು ಹಿಂದಕ್ಕೆ ಕರೆತರುವುದಕ್ಕೆ ಪ್ರಯತ್ನಿಸಿದ ಭರತನ ನಡವಳಿಕೆ, ರಾಜ್ಯದ ಹಾಗೂ ಪ್ರಜೆಗಳ ಹಿತವನ್ನು ಕಾಪಾಡುವ ವಿಷಯದಲ್ಲಿ ವಸಿಷ್ಠರ ಚಿರಜಾಗೃತ ಪರೀಕ್ಷಕ ದೃಷ್ಟಿ – ಇವೆಲ್ಲವೂ ಉತ್ತಮ ಸಂಸ್ಕೃತಿಯ ಸಮಾಜವೊಂದನ್ನು ನಮ್ಮ ಕಣ್ಣ ಮುಂದೆ ತಂದು ನಿಲ್ಲಿಸುತ್ತವೆ.

ರಾವಣನ ಆಳ್ವಿಕೆಯಲ್ಲಿರುವ ಲಂಕೆ ತುಂಬ ಅಭಿವೃದ್ಧಿ ಹೊಂದಿದ, ಕಣ್ಣು ಕೋರೈಸುವಂತಹ ಭವ್ಯತೆಯ ಸಿರಿವಂತ ನಗರ. ಆದರೆ ಅದರ ಶ್ರೀಮಂತಿಕೆಯೆಲ್ಲವೂ ಯುದ್ಧಗಳಲ್ಲಿ ಕೊಳ್ಳೆ ಹೊಡೆದು, ದರೋಡೆ ಆಕ್ರಮಣಗಳನ್ನು ನಡೆಸಿ ಬಂದುದಾಗಿತ್ತು. ಉದ್ಯಾನವನಗಳಿಂದ, ಉಪ್ಪರಿಗೆಯ ಬೃಹತ್ ಪ್ರಾಸಾದಗಳಿಂದ, ಅರಮನೆಗಳಿಂದ ಕೂಡಿದ ನಗರ ಅದು. ಅಲ್ಲಿನ ಜನಗಳ ಮುಖ್ಯವಾದ ಕಾಳಜಿ ಇಂದ್ರಿಯಭೋಗ ಪಡೆಯುವುದೇ ಆಗಿತ್ತು.

ಕಿಷ್ಕಿಂಧಾ ನಗರವನ್ನು ಒಂದು ಗುಹೆ ಎಂದು ವರ್ಣಿಸಲಾಗಿದೆ. ಅದು ಬಹುಶಃ ಒಂದು ಪರ್ವತಸ್ತೋಮದ ಒಡಲಲ್ಲಿ ನಿರ್ಮಿತವಾಗಿದ್ದಿರಬಹುದು; ಅದನ್ನು ತಲುಪುವ ಮಾರ್ಗ ಒಂದು ಗುಹೆಯ ಮೂಲಕ ಹೋಗುತ್ತಾ ಇದ್ದಿರಬಹುದು. ನಗರ ವಿಶಾಲವಾದುದು, ಚೆನ್ನಾಗಿ ರೂಪಿಸಲ್ಪಟ್ಟಂಥದು, ಸುಂದರವಾದುದು; ಮುಂದುವರೆದ ನಾಗರಿಕತೆಯನ್ನು ಸೂಚಿಸುವಂತಹ ಜೀವನಾವಶ್ಯಕ ಸುಖಸೌಲಭ್ಯಗಳೆಲ್ಲವೂ ಅಲ್ಲಿದ್ದವು.

ಸುಗ್ರೀವನು ರಾಮನಿಗೆ ಶರಣಾಗತನಾಗಿ, ರಾಮನು ಮಧ್ಯೆ ಪ್ರವೇಶಿಸದೆ ಇದ್ದಿದ್ದರೆ, ವಾಲಿಯ ಆಳ್ವಿಕೆಯಲ್ಲಿದ್ದ ಕಿಷ್ಕಿಂಧೆಯೂ ಲಂಕೆಯಂತೆಯೇ ಆಗುತ್ತಿತ್ತು. ಸುಗ್ರೀವನ ಧರ್ಮಪ್ರಜ್ಞೆ ಮತ್ತು ರಾಮನ ಮೇಲಿನ ಭಕ್ತಿ ಹಾಗೂ ಆತ್ಮಾರ್ಪಣೆಗಳು ಅದನ್ನು ವಿನಾಶದಿಂದ ಉಳಿಸಿದವು. ಇಕ್ಷ್ವಾಕು ವಂಶದ ರಾಜರ ಆಳ್ವಿಕೆಯಲ್ಲಿದ್ದ ಅಯೋಧ್ಯೆಯು, ರಾಮನ ವ್ಯಕ್ತಿತ್ವದ ಮೇಲ್ಪಂಕ್ತಿಯಿಂದ ಬೆಂಬಲಿತವಾಗಿ ಉಜ್ವಲ ಔನ್ನತ್ಯಕ್ಕೇರಿತಲ್ಲದೆ ಯುಗಯುಗಗಳಿಂದ ಯಾತ್ರಾಸ್ಥಳವಾಗಿ ಉಳಿದಿರುವಂತಾಯಿತು.

ರಾಮಾಯಣದಲ್ಲಿ ಅಡಗಿರುವ ತತ್ತ್ವವಿದು: ಸಂಪತ್ತು, ಅಧಿಕಾರಗಳು ವ್ಯಕ್ತಿಯೊಬ್ಬನನ್ನಾಗಲಿ, ರಾಷ್ಟ್ರವನ್ನಾಗಲಿ ಉಳಿಸಲಾರವು. ಸತ್ಯ, ಧರ್ಮ, ಶೀಲ ಮಾತ್ರವೇ ಸಮಾಜವನ್ನು ಉಳಿಸುವುದು ಹಾಗೂ ರಕ್ಷಿಸುವುದು.

### ಆದರ್ಶ ರಾಜ್ಯ – ರಾಮರಾಜ್ಯ

ಇಂದು ಆದರ್ಶ ರಾಜ್ಯ ಅಥವಾ ಆದರ್ಶ ರಾಷ್ಟ್ರಕ್ಕೆ 'ರಾಮರಾಜ್ಯ'ವೆಂಬ ಹೆಸರೇ ರೂಢಿಯಾಗಿ ಉಳಿದುಕೊಂಡು ಬಂದಿರುವಷ್ಟುಮಟ್ಟಿಗೆ ರಾಮನ ಆಳ್ವಿಕೆ ಆದರ್ಶವಾಗಿತ್ತು. ರಾಮಾಯಣದಲ್ಲಿರುವ ಮೂರು ಸಂಗತಿಗಳನ್ನು ಒಗ್ಗೂಡಿಸುವ ಮೂಲಕ ನಾವು ಆದರ್ಶ ರಾಜ್ಯದ ಸ್ಪಷ್ಟ ವಿವರಣೆಯನ್ನು ಪಡೆಯಬಹುದು: **ದಶರಥನ ಆಳ್ವಿಕೆಯ ವರ್ಣನೆ, ರಾಜ್ಯಭಾರ ಹೇಗೆ ನಡೆದಿದೆ ಎಂಬುದನ್ನು ತಿಳಿದುಕೊಳ್ಳಲು ಚಿತ್ರಕೂಟದಲ್ಲಿ ರಾಮನು ಭರತನನ್ನು ಕೇಳುವ ಪ್ರಶ್ನೆಗಳು** ಮತ್ತು **ಕೊನೆಯಲ್ಲಿ ಬರುವ ರಾಮನ ರಾಜ್ಯಭಾರದ ವರ್ಣನೆ.**

'ರಾಮರಾಜ್ಯ' ಎನ್ನುವ ಪದ ಆಳುವ 'ರಾಮ'ನ ಮೇಲೆಯೇ ನಿಂತಿರುವುದರಿಂದ, ಅವನು ತನ್ನ ವೈಯಕ್ತಿಕ ಹಾಗೂ ಸಾಮಾಜಿಕ ಜೀವನದಲ್ಲಿ ಸತ್ಯಧರ್ಮಗಳ ಅನುಷ್ಠಾನನಿಷ್ಠನಾದ ಒಬ್ಬ ಆದರ್ಶ ವ್ಯಕ್ತಿಯಾಗಿರಬೇಕು. ರಾಜ್ಯದ ಯೋಗಕ್ಷೇಮ ವಿಚಕ್ಷಣೆಯಲ್ಲಿ ಅವನು ಯಾವಾಗಲೂ ಜಾಗೃತನಾಗಿದ್ದಿರಬೇಕು. ಚೆನ್ನಾಗಿ ಗೊತ್ತಿರುವ ಶೀಲ ಸಾಮರ್ಥ್ಯಗಳನ್ನುಳ್ಳ ಕೆಲವೇ ಸಲಹೆಗಾರರ ಮತ್ತು ಸಣ್ಣ ಮಂತ್ರಿಮಂಡಲವೊಂದರ ಬೆಂಬಲ ಅವನಿಗಿದ್ದಿರಬೇಕು. ಜನರನ್ನು ಅವನು ಅವರವರ ಸ್ವಭಾವ, ಸಾಮರ್ಥ್ಯಗಳಿಗೆ ಅನುಗುಣವಾಗಿ ಕೆಲಸಗಳಲ್ಲಿ ತೊಡಗಿಸಿಕೊಳ್ಳುವವನಾಗಿರಬೇಕು. ಒಳ್ಳೆಯ ಸಂಘಟಿತವಾದ, ಮೂರು ಸ್ತರಗಳಲ್ಲಿ ಕಾರ್ಯ ನಿರ್ವಹಿಸುವ ಬೇಹುಗಾರಿಕೆ ವ್ಯವಸ್ಥೆ ಇದ್ದಿರಬೇಕು; ಆಡಳಿತಗಾರನು ಕಾಲಕಾಲಕ್ಕೆ ಸಂಬಳವನ್ನು ವಿತರಣೆ ಮಾಡುತ್ತಿರಬೇಕು; ಯುದ್ಧವಿದ್ಯೆಯಲ್ಲಿ ಪರಿಣತರಾದ ವೀರರನ್ನು ಸನ್ಮಾನಿಸುತ್ತಿರಬೇಕು. ವ್ಯಕ್ತಿಗಳನ್ನು ಅವರವರ ಒಳ್ಳೆಯ ಅಥವಾ ಕೆಟ್ಟ ಕಾರ್ಯಗಳಿಗನುಗುಣವಾಗಿ ಬಹುಮಾನಿಸಬೇಕು ಅಥವಾ ಶಿಕ್ಷಿಸಬೇಕು. ದೇವರಲ್ಲಿ ಮತ್ತು ಶಾಸ್ತ್ರಾಧಾರಿತವಾದ ಮೌಲ್ಯಗಳಲ್ಲಿ ನಂಬಿಕೆಯಿರುವವರನ್ನು ಸರ್ವ ರೀತಿಯಿಂದಲೂ ರಕ್ಷಿಸಬೇಕು ಮತ್ತು ಬೆಂಬಲಿಸಬೇಕು. ಇವುಗಳನ್ನು ಉಪೇಕ್ಷಿಸುವ ನಾಸ್ತಿಕರು ಮತ್ತು ಅಜ್ಞೇಯತಾವಾದಿಗಳನ್ನು ಹದ್ದುಬಸ್ತಿನಲ್ಲಿರಿಸಿರಬೇಕು.

ರಾಮನು ಸ್ವತಃ ತಾನೇ ಆದರ್ಶವ್ಯಕ್ತಿಯಾಗಿದ್ದು ಆದರ್ಶ ರಾಜನೂ ಆಗಿದ್ದುದರಿಂದ, ಅವನ ಆಳ್ವಿಕೆಯೂ ಆದರ್ಶ ವಾಗಿದ್ದಿತು. ಅವನು ಆಳುತ್ತಿರುವಾಗ ಜನರು ಸರ್ಪಗಳ, ವನ್ಯಜೀವಿಗಳ, ವ್ಯಾಧಿಗಳ, ದರೋಡೆಕೋರರ ಯಾವುದೇ ಭಯವಿಲ್ಲದಂತೆ ಸುಖವಾಗಿ ಪರಿಪಕ್ವ ವೃದ್ಧಾಪ್ಯದವರೆಗೆ ಜೀವಿಸಿರುತ್ತಿದ್ದರು. ಕಣ್ಣೆದುರಿಗೆ ಮಾದರಿಯಾಗಿ ಆದರ್ಶಪುರುಷ ರಾಮನೇ ಇದ್ದುದರಿಂದ ಎಲ್ಲರೂ ಧರ್ಮನಿರತರಾಗಿ ಲೋಭ ಹಿಂಸೆಗಳಿಂದ ಹೊರತಾಗಿ ಶಾಂತಿ ತೃಪ್ತಿಗಳಿಂದ ಜೀವಿಸಿರುತ್ತಿದ್ದರು. ಮಳೆ ಬರಿಸಿ, ಬೆಳೆ ಬೆಳೆಸಿ, ಧರೆ ತಣಿಸುವ ಪ್ರಕೃತಿಯೂ ಅವರಿಗೆ ಅನುಕೂಲವಾಗಿರುತ್ತಿದ್ದಿತು.

### ಸಾಹಿತ್ಯಿಕ ಮೆರುಗು

ಹಿಂದೂ ಧಾರ್ಮಿಕ ಸಂಪ್ರದಾಯವು ವಾಲ್ಮೀಕಿಯ ರಾಮಾಯಣವನ್ನು ವೇದಗಳಿಗೆ ಮಾತ್ರ ಎರಡನೆಯದಾದ ಸ್ಮೃತಿ ಎಂದು ಪರಿಗಣಿಸಿದೆ. ಸಾಹಿತ್ಯ ಸಂಪ್ರದಾಯವು ಅದನ್ನು 'ಆದಿಕಾವ್ಯ'ವೆಂದು ಕರೆದು ವಾಲ್ಮೀಕಿಗೆ 'ಆದಿಕವಿ' ಎಂಬ ಅಭಿದಾನವನ್ನು ಕೊಡುತ್ತದೆ. ಈ ಮಹತ್ಕೃತಿಯು ಈ ಅಭಿಧಾನಕ್ಕೆ ಯೋಗ್ಯವೇ ಆಗಿದೆ; ಮುಂದೆ ಬರಲಿರುವ ಎಲ್ಲ ಕವಿಗಳಿಗೂ ಅನುಕರಣಯೋಗ್ಯವಾದ ಮಾದರಿ ಕಾವ್ಯವಾಗಿದೆ.

ವಾಲ್ಮೀಕಿಯ ಪ್ರತಿಭೆ ಶ್ರೇಷ್ಠ ಉಪಮೆಗಳ ಹಾಗೂ ರೂಪಕಾಲಂಕಾರಗಳ ಬಳಕೆಯಲ್ಲಿದೆ. ಪ್ರೀತಿ–ಮೋಹ, ದ್ವೇಷ–ತ್ಯಾಗ, ನಿರ್ಭೀತಿ–ಶೌರ್ಯ ಮೊದಲಾದ ಮಾನವಸಹಜವಾದ ಸಂವೇದನೆಗಳಾಗಲಿ, ಋತುವರ್ಣನೆ ಮೊದಲಾದ ಪ್ರಕೃತಿ ಸೌಂದರ್ಯದ ಚಿತ್ರಣವಾಗಲಿ, ವಿಕಾರದೇಹಿಗಳ ಹಾಸ್ಯಪೂರಿತ ವರ್ಣನೆಯಾಗಲಿ, ವಾಲ್ಮೀಕಿಯ ಉಪಮಾನಗಳು ಅತ್ಯಂತ ಮನೋಹರವಾಗಿದ್ದು, ವಿವರಿಸಬೇಕಾಗಿದ್ದ ವಸ್ತುವನ್ನು ಕಣ್ಣ ಮುಂದೆ ತಂದು ನಿಲ್ಲಿಸುತ್ತವೆ.

### ಉಪಸಂಹಾರ

ಸಾಹಿತ್ಯಕೃತಿಯೊಂದರ ಮೌಲ್ಯವನ್ನು ಒಂದು ಇಡೀ ತಲೆಮಾರಿನ ಮೇಲೆ ಅದು ಬೀರಿರುವ ಪರಿಣಾಮದಿಂದ ಅಳೆಯುವುದಾದರೆ, ಅನೇಕ ತಲೆಮಾರುಗಳ ಮೂಲಕ ಇಂದಿಗೂ ಪ್ರಭಾವ ಬೀರುತ್ತಿರುವ ಆದಿಕವಿ ವಾಲ್ಮೀಕಿಯ ರಾಮಾಯಣ ಪರಮೋತ್ಕೃಷ್ಟವಾಗಿ ನಿಲ್ಲುತ್ತದೆ. ನಮ್ಮ ಧರ್ಮ, ಸಾಮಾಜಿಕ ಮೌಲ್ಯಗಳು, ಸಾಹಿತ್ಯ, ಸಂಗೀತ, ನಾಟಕ, ಚಿತ್ರಕಲೆ, ಶಿಲ್ಪಕಲೆ–ಏಕೆ, ನಮ್ಮ ಜೀವನದ ಎಲ್ಲ ಅಂಶಗಳ ಮೇಲೂ ಅದರ ಪ್ರಭಾವವಿರುವುದು ಸುಲಭಗೋಚರವಾಗುತ್ತದೆ.

ಏನೇ ಬಂದರೂ ಸತ್ಯಧರ್ಮಗಳಿಗೆ ಒತ್ತಾಸೆಯಾಗಿ ನಿಲ್ಲುವ ಆದರ್ಶ ಪುರುಷನನ್ನು ಮತ್ತು ಮೌಲಿಕ ಸ್ತ್ರೀತ್ವದ ಪರಮೋತ್ಕೃಷ್ಟ ಆದರ್ಶ ಸ್ತ್ರೀಯನ್ನು ಈ ಕೃತಿ ನಮಗೆ ಕೊಟ್ಟಿದೆ. ಪ್ರತಿಯೊಬ್ಬರೂ ಇನ್ನೊಬ್ಬರ ಯೋಗಕ್ಷೇಮವನ್ನು ಮೊದಲ ಆದ್ಯತೆಯಾಗಿ ಪರಿಗಣಿಸುವ ಕುಟುಂಬ ವ್ಯವಸ್ಥೆಯೊಂದನ್ನು ಅದು ನಮಗೆ ತೋರಿಸಿದೆ. ತಮ್ಮ ಪ್ರಿಯಜನರ ಸುಖಸಂತೋಷಗಳಿಗಾಗಿ ಇನ್ನಿಲ್ಲದಂತೆ ಶ್ರಮಿಸುವ ಆದರ್ಶ ಸೋದರರ, ಆದರ್ಶ ಸ್ನೇಹಿತರ, ಆದರ್ಶ ಸೇವಕರ ಮಾದರಿಗಳು ಇಲ್ಲಿವೆ. ಆದರ್ಶ ರಾಜ್ಯವ್ಯವಸ್ಥೆಯನ್ನೂ ಅದು ನಮ್ಮೆದುರು ಇಟ್ಟಿದೆ. ಇನ್ನೂ ಹೇಳುವುದಾದರೆ, ಮಾನವನ ಹಂತದಿಂದ ದೈವತ್ವದೆತ್ತರಕ್ಕೆ ಏರುವ ಸ್ಫೂರ್ತಿಯನ್ನೀಯಲು ಸಾಕಷ್ಟು ಸೊಗಸಾದ ಕಲ್ಪನೆಗಳನ್ನು, ಆದರ್ಶಗಳನ್ನು ಅದು ನಮ್ಮ ಮುಂದೆ ಚಿತ್ರಿಸಿದೆ. ಈ ಸ್ಫೂರ್ತಿಯನ್ನು ನಾವು ಅಳವಡಿಸಿಕೊಂಡರೆ ಈ ಶಾಸ್ತ್ರಗ್ರಂಥದ ಅಧ್ಯಯನ ತುಂಬ ಪ್ರಯೋಜನಕಾರಿಯಾಗಬಹುದು.

(**ಆಧಾರ:** *ವಾಲ್ಮೀಕಿ ರಾಮಾಯಣ, ಒಂದು ಪರಿಚಯ* ಅನುವಾದ: ಡಾ. ಎಚ್.ರಾಮಚಂದ್ರಸ್ವಾಮಿ)

★

# ಕೃತ್ತಿವಾಸ ರಾಮಾಯಣ – ಒಂದು ಪರಿಚಯ

ಸ್ವಾಮಿ ಕರುಣಾಕರಾನಂದ



ಕೃತ್ತಿವಾಸನು ಬಂಗಾಳದ ವರಕವಿ. ಆತನು ಬಂಗಾಳಿ ಭಾಷೆಯಲ್ಲಿ ರಚಿಸಿರುವ ರಾಮಾಯಣ ಮಹಾಕಾವ್ಯವು  ಒಂದು ಮಹಾನ್ ಕೃತಿರತ್ನ. ಇದರ ವಿಸ್ತೃತ ವಿವರಣೆಯನ್ನು ಮಾಡಿಕೊಟ್ಟಿರುವ ಸ್ವಾಮೀಜಿಯವರು ಮೈಸೂರಿನ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಉತ್ತಮ ವಾಗ್ಮಿಗಳಾದ ಇವರು ಒಳ್ಳೆಯ ಬರಹಗಾರರು ಕೂಡ.

ಆದಿಕವಿ ವಾಲ್ಮೀಕಿಯಿಂದ ರಚನೆಗೊಂಡ ರಾಮಾಯಣವು ಕಾಲಕ್ರಮೇಣ ಭಾರತದ ಹಾಗೂ ಇತರೆ ದಕ್ಷಿಣ ಏಷ್ಯಾ ದೇಶಗಳ ಜನರ ಸಾಹಿತ್ಯ ಹಾಗೂ ಸಂಸ್ಕೃತಿಯ ಮೇಲೆ ತನ್ನ ಅಚ್ಚಳಿಯದ ಪ್ರಭಾವವನ್ನು ಬೀರಿದೆ. ಅದರ ನಂತರ ಹುಟ್ಟಿಕೊಂಡ ಅನೇಕ ಪ್ರಾಂತೀಯ ರಾಮಾಯಣಗಳು, ತಮ್ಮ ಮುಖ್ಯ ಕಥಾವಸ್ತುವಿಗಾಗಿ ವಾಲ್ಮೀಕಿಯನ್ನೇ ಆಧಾರವನ್ನಾಗಿ ಇಟ್ಟುಕೊಂಡಿದ್ದರೂ ಅವುಗಳಲ್ಲಿ ತಮ್ಮ ಸ್ಥಳೀಯ ಸಂಸ್ಕೃತಿಯನ್ನು, ಸಾಹಿತ್ಯವನ್ನು ಮಿಶ್ರ ಮಾಡಿ ತಮ್ಮದಾಗಿಸಿಕೊಂಡಿವೆ. ಅದು ಎಷ್ಟರಮಟ್ಟಿಗೆಂದರೆ ಜಾನಪದ ಸಾಹಿತ್ಯಗಳಲ್ಲೂ ಅದು ಆಳವಾಗಿ ಬೇರುಬಿಟ್ಟಿದೆ. ಹೀಗಾಗಿ ವಾಲ್ಮೀಕಿ ರಾಮಾಯಣಕ್ಕೆ ಈ ಜಾನಪದವೇ ಆಧಾರವೇನೋ ಎಂಬ ಭ್ರಮೆಯನ್ನು ಕೂಡ ಜಾನಪದ ಸಂಶೋಧಕರಲ್ಲಿ ಅದು ಹುಟ್ಟಿಸಿದೆ. ಒಂದು ಸಮೀಕ್ಷೆಯ ಪ್ರಕಾರ ಜಗತ್ತಿನಲ್ಲಿ ಸುಮಾರು ೩೦೦ ಕ್ಕೂ ಹೆಚ್ಚು ರಾಮಾಯಣಗಳಿವೆ (ನೋಡಿ: ಪೌಲಾ ರಿಚ್‌ಮನ್ ಅವರ *Many Ramayanas: Diversity of a narrative tradition in South-Asia*, Oxford Publication). ಬೌದ್ಧಧರ್ಮಕ್ಕೆ ಸೇರಿದ ಜಾತಕ ಕತೆಗಳಲ್ಲಿ ಕೂಡ 'ದಶರಥ ಜಾತಕ'ವೆಂಬ ರಾಮಾಯಣದ ಕತೆ ಬರುತ್ತದೆ. ೧೨ನೇ ಶತಮಾನದ ಹೇಮಚಂದ್ರ ಆಚಾರ್ಯರ ಜೈನರಾಮಾಯಣವೂ ಜೈನ ಸಮುದಾಯದಲ್ಲಿ ಪ್ರಚಲಿತವಿದೆ. ಇವಲ್ಲದೆ ಇತ್ತೀಚಿನ ಸಾಹಿತಿಗಳಿಂದ ಆಧುನಿಕ ಯುಗದ ಜನರ ಜೀವನಶೈಲಿ ಹಾಗೂ ಆಧುನಿಕ ಸಮಾಜದ ಸಮಸ್ಯೆಗಳಿಗೆ ಸ್ಪಂದಿಸುವಂತಹ ಅಂಶಗಳನ್ನು ಒಳಗೊಳ್ಳುವಂತೆ ಬರೆದ ರಾಮಾಯಣದ ಮೇಲಿನ ಬರೆಹಗಳೂ ಆಗಾಗ ಪ್ರಕಟಗೊಳ್ಳುತ್ತಲೇ ಇವೆ. ಇದಕ್ಕೆ ಶ್ರೀ ಕೆ. ಎಸ್. ಶ್ರೀನಿವಾಸ ಅಯ್ಯಂಗಾರರು ಬರೆದ 'ಸೀತಾಯನ' ಹಾಗೂ ಶ್ರೀ ವೀರಪ್ಪ ಮೊಯಿಲಿಯವರ 'ಶ್ರೀರಾಮಾಯಣ ಮಹಾನ್ವೇಷಣಂ' ನಿದರ್ಶನಗಳು.

## ಬಂಗಾಳಿ ಸಾಹಿತ್ಯದಲ್ಲಿ ರಾಮಾಯಣಗಳು

ಬಂಗಾಳಿ ಭಾಷೆಯಲ್ಲಿ ರಾಮಾಯಣದ ರಚನೆ ಆರಂಭವಾದದ್ದು ಕೃತ್ತಿವಾಸ ಓಝಾ ಎಂಬ ಮಹಾಕವಿಯಿಂದ. ಇದಕ್ಕೆ ಪುಷ್ಟಿ ನೀಡುವಂತೆ ಬಂಗಾಳಿ ಭಾಷೆಯ ಕವಿಕಂಕಣ ಬಿರುದನ್ನು ಹೊಂದಿದ್ದ ಮುಕುಂದರಾಮ ಚಕ್ರವರ್ತಿ ಎಂಬ ೧೬ನೇ ಶತಮಾನದ ಕವಿ, 'ಚಂಡೀಮಂಗಲ' ವೆಂಬ ಪ್ರಸಿದ್ಧ ಕಾವ್ಯದಲ್ಲಿ,